## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 788 (961) & 890 (961)

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 24.07.2024.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾದರಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆ.ಎಸ್.ಆರ್.ಟಿ.ಸಿ) ಸೇರಿದಂತೆ ಎಲ್ಲಾ ಸಾರಿಗೆ ಸಂಸ್ಥೆಗಳ ವ್ಯಾಪ್ತಿಯಲ್ಲಿ ಡಿಜಿಟಲ್ ರೂಪದಲ್ಲಿ ಹಣ ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆ ಜಾರಿಗೊಳಿಸುವ ಕುರಿತು ಸರ್ಕಾರದ ನಿಲುವೇನು; | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾದರಿಯಲ್ಲಿ ಉಳಿದ ಮೂರು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಡಿಜಿಟಲ್ ರೂಪದಲ್ಲಿ ಹಣ ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆ ಜಾರಿಗೊಳಿಸುವ ಕುರಿತಾದ ಮಾಹಿತಿ ಕೆಳಕಂಡಂತಿದೆ:-<br><br>**<u>ಕ.ರಾ.ರ.ಸಾ.ನಿಗಮ:-</u>**<br>ಈಗಾಗಲೇ ನಿಗಮದಲ್ಲಿ ಎಲ್ಲಾ ರೀತಿಯ ಡಿಜಿಟಲ್ ಹಣ ಪಾವತಿ ಮಾಡಲು ಅವಕಾಶವಿರುವಂತಹ ಸ್ಮಾರ್ಟ್ ಇಟಿಎಂಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಖರೀದಿ ಆದೇಶವನ್ನು ಜಾರಿಗೊಳಿಸಿದ್ದು, ಅನುಷ್ಠಾನ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಹಾಗೂ ಬ್ಯಾಂಕ್ ಜೊತೆ ಏಕೀಕರಣವನ್ನು ಸಾಧಿಸಿ ಡಿಜಿಟಲ್ ಪೇ ಜಾರಿಗೊಳಿಸಲು ಉದ್ದೇಶಿಸಲಾಗಿರುತ್ತದೆ.<br><br>**<u>ವಾ.ಕ.ರ.ಸಾ.ಸಂಸ್ಥೆ:-</u>**<br>ಸಂಸ್ಥೆಯಲ್ಲಿ ಡಿಜಿಟಲ್ ರೂಪದಲ್ಲಿ ಹಣ ಪಾವತಿಸಿ ಟಿಕೇಟ್ ಪಡೆಯುವ ವ್ಯವಸ್ಥೆಯನ್ನು ಫೋನ್‌ಪೇ ಇವರ ಸಹಯೋಗದೊಂದಿಗೆ ಸಂಸ್ಥೆಯ ಎಲ್ಲಾ ಬಸ್ಸುಗಳಲ್ಲಿ (ನಗರ ಸಾರಿಗೆ ಹೊರತುಪಡಿಸಿ) ವ್ಯವಸ್ಥೆ ಜಾರಿಗೊಳಿಸಲಾಗಿದೆ. |
| ಆ. | 'ಡಿಜಿಟಲ್ ಪೇ' ಜಾರಿಗೊಳಿಸಲು ನಿರ್ಧರಿಸಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ರೂಪುರೇಷೆಗಳೇನು; | **<u>ಕ.ಕ.ರ.ಸಾ.ನಿಗಮ:-</u>**<br>ಪ್ರಸ್ತುತ Non Android based Electronic Ticketing Machines (ETM) ಇರುವುದರಿಂದ ಡಿಜಿಟಲ್ ಹಣ ಪಾವತಿಸುವ ವ್ಯವಸ್ಥೆ ಇರುವುದಿಲ್ಲ. ಮುಂದಿನ 06 ತಿಂಗಳಲ್ಲಿ ಡಿಜಿಟಲ್ ಹಣ ಪಾವತಿಸುವ ವ್ಯವಸ್ಥೆ ಒಳಗೊಂಡಂತೆ Android based Smart ETMಗಳನ್ನು ಅಳವಡಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ. |
| ಇ. | ಈ ವ್ಯವಸ್ಥೆ ಜಾರಿಗೆ ತರಲು ಬೇಕಾದ ಅಂದಾಜು ಅನುದಾನ ಎಷ್ಟು; | **<u>ಕ.ರಾ.ರ.ಸಾ.ನಿಗಮ:-</u>**<br>ಬ್ಯಾಂಕ್ ಜೊತೆ ಏಕೀಕರಣವನ್ನು ಸಾಧಿಸಿ ಡಿಜಿಟಲ್ ಪೇ ಜಾರಿಗೊಳಿಸಲು ಉದ್ದೇಶಿಸಲಾಗಿದ್ದು, ಪ್ರಸ್ತುತ ಯಾವುದೇ ಅನುದಾನವನ್ನು ಪಡೆದಿರುವುದಿಲ್ಲ.<br>**<u>ಬೆಂ.ಮ.ಸಾ.ಸಂಸ್ಥೆ:-</u>**<br>ಪ್ರಸ್ತುತ ಸಂಸ್ಥೆಯು QR ಕೋಡ್ (STATIC) ಆಧಾರಿತ ಡಿಜಿಟಲ್ ಪೇಮೆಂಟ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ ಹಾಗೂ ಡಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಜಿಟಲ್/ಮೊಬೈಲ್ ತಂತ್ರಾಂಶದ ಮೂಲಕ ಸಂಸ್ಥೆಯ ಸೇವೆಗಳಿಗನುಗುಣವಾಗಿ ಪಾಸುಗಳನ್ನು (ದೈನಂದಿನ/ವಾರದ/ಮಾಸಿಕ) ಆನ್‌ಲೈನ್ ವ್ಯವಸ್ಥೆಯಡಿಯಲ್ಲಿ ಖರೀದಿಸಬಹುದಾಗಿರುತ್ತದೆ. ಸದರಿ ಸೌಲಭ್ಯಗಳಿಗೆ ಸಂಸ್ಥೆಯು ಯಾವುದೇ ವೆಚ್ಚ ಭರಿಸುತ್ತಿರುವುದಿಲ್ಲ. ಸದರಿ ಸೌಲಭ್ಯವನ್ನು ಯಾವುದೇ ಆರ್ಥಿಕ ಹೊರೆಯಿಲ್ಲದೆ ಫೋನ್‌ಪೇ ಇವರ ಸಹಯೋಗದೊಂದಿಗೆ ಕಾರ್ಯಗತಗೊಳಿಸಲಾಗಿದೆ.<br>ಮುಂದಿನ ದಿನಗಳಲ್ಲಿ ಸ್ವಯಂಚಾಲಿತ ಶುಲ್ಕ ಸಂಗ್ರಹಣಾ ವ್ಯವಸ್ಥೆಯು ಅನುಷ್ಠಾನಗೊಂಡರೆ, ಸದರಿ ವ್ಯವಸ್ಥೆಯನ್ನು (DYNAMIC) ಸಂಪೂರ್ಣವಾಗಿ ಜಾರಿಗೆ ತರಲು ಬೇಕಾದ ಅಂದಾಜು ರೂ.48.85 ಕೋಟಿ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ.<br><br>**ವಾ.ಕ.ರ.ಸಾ.ಸಂಸ್ಥೆ:-**<br>‘ಡಿಜಿಟಲ್ ಪೇ’ ವ್ಯವಸ್ಥೆಯನ್ನು ಜಾರಿಗೊಳಿಸಲು ಸರ್ಕಾರದಿಂದ ಯಾವುದೇ ಅನುದಾನ ಪಡೆದಿರುವುದಿಲ್ಲ.<br><br>**ಕ.ಕ.ರ.ಸಾ.ನಿಗಮ:-**<br>ಡಿಜಿಟಲ್ ಹಣ ಪಾವತಿಸುವ ವ್ಯವಸ್ಥೆ ಒಳಗೊಂಡಂತೆ Android based Smart ETMಗಳನ್ನು ಅಳವಡಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದ್ದು, ಸದರಿ ವ್ಯವಸ್ಥೆ ಜಾರಿಗೆ ತರಲು ವಾರ್ಷಿಕವಾಗಿ ರೂ. 3.90 ಕೋಟಿಗಳ ಅಂದಾಜು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. |
| ಈ. | ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳನ್ನು (ಇಟಿಎಂ) ಯಾವ ಸಂಸ್ಥೆಯಿಂದ ಖರೀದಿಸಲಾಗುತ್ತಿದೆ; ಸದರಿ ಯಂತ್ರಗಳನ್ನು ಖರೀದಿಸಲು ಅನುಸರಿಸುವ ಮಾನದಂಡಗಳೇನು ಇದಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು; | **ಕ.ರಾ.ರ.ಸಾ.ನಿಗಮ:-**<br>ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳನ್ನು M/s Ebix Cash Ltd., ಇವರಿಂದ ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಫೆಬ್ರುವರಿ-2024ರಲ್ಲಿ ಟೆಂಡರ್ ಮೂಲಕ ಒಟ್ಟು 10,245 ಇಟಿಎಂಗಳನ್ನು ಮಾಸಿಕ ಬಾಡಿಗೆ ರೂ. 645/-ರಂತೆ (ಪ್ರತಿ ಇಟಿಎಂಗೆ) ಪಡೆಯಲು ಖರೀದಿ ಆದೇಶ ನೀಡಲಾಗಿದೆ.<br><br>**ಬೆಂ.ಮ.ಸಾ.ಸಂಸ್ಥೆ:-**<br>ಮೆ\|\|ಪೈನ್‌ಲಾಟ್ಸ್ ಕಂಪನಿ, ಇವರಿಂದ ಒಂದು ವರ್ಷದ ಅವಧಿಗೆ ಬಾಡಿಗೆ ಆಧಾರದ ಮೇಲೆ ಟೆಂಡರ್ ಮೂಲಕ ಇಟಿಎಂಗಳನ್ನು ಪಡೆಯಲಾಗಿರುತ್ತದೆ. ಒಂದು ವರ್ಷದ ಅವಧಿಗೆ ಇಟಿಎಂಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಪ್ರತಿ ಇಟಿಎಂಗೆ ಪ್ರತಿ ತಿಂಗಳು ರೂ.399/- ಮೊತ್ತವನ್ನು ಪಾವತಿಸಲಾಗುತ್ತಿದೆ ಹಾಗೂ ವಾರ್ಷಿಕ ರೂ. 4,54,86,000.00 ಮೊತ್ತವು ತಗಲುತ್ತದೆ.<br><br>**ವಾ.ಕ.ರ.ಸಾ.ಸಂಸ್ಥೆ:-**<br>ಸಂಸ್ಥೆಯು ಒಟ್ಟು 5500 ಎಲೆಕ್ಟ್ರಾನಿಕ್ ಟಿಕೇಟಿಂಗ್ ಯಂತ್ರಗಳನ್ನು (ಇಟಿಎಂ) ಮೆ\|\|ಮೈಕ್ರೋ ಎಫ್.ಎಕ್ಸ್. ಕಂಪನಿ, ಇವರಿಂದ ಟೆಂಡರ ಪ್ರಕ್ರಿಯೆ ಮೂಲಕ ಖರೀದಿಸಲಾಗಿರುತ್ತದೆ.<br>ಸದರಿ 5000 ಇಟಿಎಂಗಳನ್ನು ರೂ.7788/- (ಪ್ರತಿ ಇಟಿಎಂಗೆ) ಮತ್ತು 500 ಇಟಿಎಂಗಳನ್ನು ರೂ. 7670/- (ಪ್ರತಿ ಇಟಿಎಂಗೆ) ದರದಲ್ಲಿ ಖರೀದಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸಲಾಗಿರುತ್ತದೆ. ಸದರಿ ಇಟಿಎಂ ಯಂತ್ರಗಳ ಖರೀದಿಯ ಒಟ್ಟು ಮೊತ್ತ ರೂ. 427.75 ಲಕ್ಷಗಳಾಗಿರುತ್ತವೆ.<br><br>**ಕ.ಕ.ರ.ಸಾ.ನಿಗಮ**:-<br>ನಿಗಮವು ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳನ್ನು (ಇ.ಟಿ.ಎಂ) ಟೆಂಡರ್ ಮುಖಾಂತರ ಆಯ್ಕೆಯಾದ ಸಂಸ್ಥೆಯಿಂದ ಖರೀದಿಸಲಾಗುವುದು. ವಾರ್ಷಿಕವಾಗಿ ರೂ.3.90 ಕೋಟಿಗಳ ಅಂದಾಜು ವೆಚ್ಚವಾಗುತ್ತದೆ. |
| ಉ. | ರಾಜ್ಯದಲ್ಲಿರುವ ನಿರ್ವಾಹಕರು/ ಚಾಲಕರ ಸಂಖ್ಯೆ ಎಷ್ಟು, ಈ ಪೈಕಿ ಎಷ್ಟು ಮಂದಿಗೆ ಎಷ್ಟು ಹಂತಗಳಲ್ಲಿ ತರಬೇತಿ ನೀಡಲು ಉದ್ದೇಶಿಸಲಾಗಿದೆ, ಇದಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು; | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿರುವ ನಿರ್ವಾಹಕರು/ಚಾಲಕರ ಸಂಖ್ಯೆ, ತರಬೇತಿ ನೀಡಿರುವ ಸಿಬ್ಬಂದಿ ಮತ್ತು ತರಬೇತಿ ಹಂತ ಹಾಗೂ ಸದರಿ ತರಬೇತಿಗೆ ತಗಲುವ ವೆಚ್ಚದ ವಿವರಗಳು ಕೆಳಕಂಡಂತಿದೆ :- |

| ಹುದ್ದೆ | ಕರ್ತವ್ಯ ನಿರ್ವಹಣೆ | ತರಬೇತಿ ನೀಡಲು ಉದ್ದೇಶಿಸಿರುವ ಸಿಬ್ಬಂದಿ ಸಂಖ್ಯೆ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| **ಕ.ರಾ.ರ.ಸಾ.ನಿಗಮ** | | | |
| ಚಾಲಕ | 8221 | 1100 | 2.30 |
| ನಿರ್ವಾಹಕ | 2125 | 350 | 0.73 |
| ಚಾಲಕ ಕಂ ನಿರ್ವಾಹಕ | 13948 | 1530 | 3.20 |
| **ಒಟ್ಟು** | **24294** | **2980** | **6.23** |
| **ತರಬೇತಿ ಹಂತ:** ಪ್ರತಿ ವಾರಕ್ಕೊಂದು ತಂಡ ರಚಿಸಿ ತರಬೇತಿ ನೀಡಲಾಗುವುದು. | | | |
| **ಬೆಂ.ಮ.ಸಾ.ಸಂಸ್ಥೆ** | | | |
| ಚಾಲಕ | 10373 | - | - |
| ನಿರ್ವಾಹಕ | 8399 | 8399 | ಡಿಜಿಟಲ್ ವ್ಯವಸ್ಥೆಯ ಕುರಿತು service provider ವತಿಯಿಂದ ತರಬೇತಿ ನೀಡಲಾಗುತ್ತಿರುವುದರಿಂದ ಯಾವುದೇ ವೆಚ್ಚವನ್ನು ಸಂಸ್ಥೆಯಿಂದ ಭರಿಸಲಾಗುವುದಿಲ್ಲ. |
| ಚಾಲಕ ಕಂ ನಿರ್ವಾಹಕ | 3863 | 3863 | |
| **ಒಟ್ಟು** | **22635** | **12262** | |
| **ವಾ.ಕ.ರ.ಸಾ.ಸಂಸ್ಥೆ** | | | |
| ಚಾಲಕ | 3822 | - | - |
| ನಿರ್ವಾಹಕ | 2509 | 2509 | ವಿಭಾಗವಾರು 8 ಹಂತಗಳಲ್ಲಿ ತರಬೇತಿ ನೀಡಲಾಗುತ್ತಿದ್ದು, |
| ಚಾಲಕ ಕಂ ನಿರ್ವಾಹಕ | 8171 | 8171 | |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

| | | | |
|---|---|---|---|
| **ಒಟ್ಟು** | **14502** | **10680** | ಯಾವುದೇ ಆರ್ಥಿಕ ವೆಚ್ಚ ಉಂಟಾಗಿರುವುದಿಲ್ಲ. |
| **ಕ.ಕ.ರ.ಸಾ.ನಿಗಮ** | | | |
| ಚಾಲಕ | 5421 | 1085 | 2.28 |
| ನಿರ್ವಾಹಕ | 972 | 195 | 0.41 |
| ಚಾಲಕ ಕಂ ನಿರ್ವಾಹಕ | 7241 | 1449 | 3.04 |
| **ಒಟ್ಟು** | **13634** | **2729** | **5.73** |

**ತರಬೇತಿಯನ್ನು ಪ್ರತಿ ತಿಂಗಳಿಗೆ 2 ಹಂತಗಳಂತೆ ಒಂದು ವರ್ಷದಲ್ಲಿ ನೀಡಲಾಗುವುದು.**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಊ | ಕಳೆದ ಮೂರು ವರ್ಷಗಳಲ್ಲಿ ಸಾರಿಗೆ ಬಸ್ಸುಗಳಲ್ಲಿ ಟಿಕೆಟ್ ರಹಿತ ಪ್ರಯಾಣಿಕರಿಗೆ ವಿಧಿಸಿರುವ ದಂಡದ ಮೊತ್ತ ಎಷ್ಟು; ಎಷ್ಟು ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ? (ವರ್ಷವಾರು ಮಾಹಿತಿ ನೀಡುವುದು) | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಟಿಕೆಟ್ ರಹಿತ ಪ್ರಯಾಣಿಕರಿಗೆ ವಿಧಿಸಿರುವ ದಂಡದ ಮೊತ್ತ ಮತ್ತು ದಂಡ ವಿಧಿಸಲಾಗಿರುವ ಪ್ರಯಾಣಿಕರ ಸಂಖ್ಯೆ ಕೆಳಕಂಡಂತಿದೆ:- |

**(ರೂ.ಲಕ್ಷಗಳಲ್ಲಿ)**

**ಕ.ರಾ.ರ.ಸಾ.ನಿಗಮ**

| ವರ್ಷ | ದಂಡದ ಮೊತ್ತ | ಪ್ರಯಾಣಿಕರ ಸಂಖ್ಯೆ |
|---|---|---|
| 2021-2022 | 50.38 | 32569 |
| 2022-2023 | 68.84 | 45759 |
| 2023-2024 | 62.87 | 39818 |
| **ಒಟ್ಟು** | **182.09** | **118146** |

**ಬೆಂ.ಮ.ಸಾ.ಸಂಸ್ಥೆ**

| ವರ್ಷ | ದಂಡದ ಮೊತ್ತ | ಪ್ರಯಾಣಿಕರ ಸಂಖ್ಯೆ |
|---|---|---|
| 2021-2022 | 32.88 | 18613 |
| 2022-2023 | 62.38 | 33168 |
| 2023-2024 | 79.65 | 39859 |
| **ಒಟ್ಟು** | **174.91** | **91640** |

**ವಾ.ಕ.ರ.ಸಾ.ಸಂಸ್ಥೆ**

| ವರ್ಷ | ದಂಡದ ಮೊತ್ತ | ಪ್ರಯಾಣಿಕರ ಸಂಖ್ಯೆ |
|---|---|---|
| 2021-2022 | 20.88 | 21451 |
| 2022-2023 | 29.19 | 31410 |
| 2023-2024 | 31.14 | 36397 |
| **ಒಟ್ಟು** | **81.21** | **89258** |

**ಕ.ಕ.ರ.ಸಾ.ನಿಗಮ**

| ವರ್ಷ | ದಂಡದ ಮೊತ್ತ | ಪ್ರಯಾಣಿಕರ ಸಂಖ್ಯೆ |
|---|---|---|
| 2021-2022 | 15.69 | 9271 |

| ಕ್ರ. ಸಂ | ಪ್ರಶ್ನೆ | ಉತ್ತರ | | |
|---|---|---|---|---|
| | | 2022-2023 | 24.62 | 13608 |
| | | 2023-2024 | 21.95 | 13037 |
| | | **ಒಟ್ಟು** | **62.26** | **35916** |

ಸಂಖ್ಯೆ: ಟಿಡಿ 147 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು